1. ಈ ಪ್ರದೇಶದಲ್ಲಿ ಬರುವ ಎಲ್ಲಾ ಹಳ್ಳಿಗಳಲ್ಲಿ ವಾರಕ್ಕೊಮ್ಮೆ ಜ್ವರ ನಿಗಾವಣೆ ಕಾರ್ಯವನ್ನು ಕೈಗೊಂಡು ಜ್ವರ ಪ್ರಕರಣಗಳಿಗೆ ಮತ್ತು ಖಚಿತಪಟ್ಟ ಮಲೇರಿಯ ಪ್ರಕರಣಗಳಿಗೆ ಸೂಕ್ತ ಚಿಕಿತ್ಸೆ ನೀಡಲಾಗುತ್ತಿದೆ.
2. ರೋಗವಾಹಕ ಸೊಳ್ಳೆಯ ನಿಯಂತ್ರಣಕ್ಕೆ ನಿಯತಕಾಲಿಕವಾಗಿ ಜಿಲ್ಲಾ ಹಳಿಗಳಲ್ಲಿ ಕೀಟನಾಶಕ ಸಿಂಪಡಣಾ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ.
3. ಸೊಳ್ಳೆಗಳ ನಿಯಂತ್ರಣಕ್ಕೆ ಲಾರ್ವಾಹಾರಿ ಮೀನುಗಳ ಬಳಕೆಯಿಂದ ಜೈವಿಕ ನಿಯಂತ್ರಣ ಕಾರ್ಯವನ್ನು ಸಹ ಹಮ್ಮಿಕೊಳ್ಳಲಾಗಿದೆ.
4. ಈ ರೋಗದ ಅರಿವು ಮತ್ತು ನಿಯಂತ್ರಣಕ್ಕೆ ವ್ಯಾಪಕವಾಗಿ ಜನಸಮುದಾಯಕ್ಕೆ ಆರೋಗ್ಯ ಶಿಕ್ಷಣ ನೀಡಲಾಗಿದೆ.

ಬಾಗಲಕೋಟೆ ಜಿಲ್ಲಾ ಆಸ್ಪತ್ರೆಯಲ್ಲಿ ಖಾಲಿ ಹುದ್ದೆಗಳು

1014 - ಶ್ರೀ ಪೂಜಾರ್ (ಬಾಗಲಕೋಟೆ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬಾಗಲಕೋಟೆ ಜಿಲ್ಲಾ ಆಸ್ಪತ್ರೆಯಲ್ಲಿ ಖಾಲಿ ಇರುವ ವೈದ್ಯಾಧಿಕಾರಿಗಳ ಮತ್ತು ಸಿಬ್ಬಂದಿಗಳ ಸಂಖ್ಯೆ ಎಷ್ಟು?*

ಆ) *ಇವುಗಳನ್ನು ತುಂಬಲು ಸರ್ಕಾರ ಯೋಚಿಸಿದೆಯೇ?*

ಇ) *ಹಾಗಿದ್ದಲ್ಲಿ ಎಂದಿನಿಂದ ತುಂಬಲಾಗುವುದು?*

ಡಾ || ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ವೈದ್ಯಾಧಿಕಾರಿಗಳು 2
ಸಿಬ್ಬಂದಿಗಳು 8

ಆ) ಹೌದು.

ಇ) ವೈದ್ಯರನ್ನು ವೈದ್ಯರ ನೇಮಕಾತಿ ಪ್ರಕ್ರಿಯೆ ಮುಗಿದನಂತರ ಹಾಗೂ ಸಿಬ್ಬಂದಿಗಳನ್ನು ಸಾರ್ವತ್ರಿಕ ವರ್ಗಾವಣೆ ಸಮಯದಲ್ಲಿ ವರ್ಗಾವಣೆ ಮುಖಾಂತರ ತುಂಬಲಾಗುವುದು.

ವಿಶ್ವಬ್ಯಾಂಕ್ ಯೋಜನೆಯಡಿಯಲ್ಲಿ ಬೆಳಗಾಂ ಜಿಲ್ಲೆಯ ಗ್ರಾಮ ಪಂಚಾಯತಿಗಳ ಅಭಿವೃದ್ಧಿ

1015 - ಶ್ರೀ ಪಾಟೀಲ ಕಾಕಾಸಾಹೇಬ ಪಾಂಡುರಂಗ (ನಿಪ್ಪಾಣಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ವಿಶ್ವಬ್ಯಾಂಕ್ ಯೋಜನೆಯಡಿಯಲ್ಲಿ ಬೆಳಗಾಂ ಜಿಲ್ಲೆಯ ಎಷ್ಟು ಗ್ರಾಮಗಳಿಗೆ ಗ್ರಾಮೀಣಾಭಿವೃದ್ಧಿ ಯೋಜನೆಯನ್ನು ಅಳವಡಿಸಲಾಗಿದೆ?*